# ದಿನಂಪ್ರತಿ  ಅಪರಾಧಗಳ ಮಾಹಿತಿ ದಿನಾಂಕ: 07-10-2022

## ಬಗದಲ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 76/2022 ಕಲಂ 379 ಐಪಿಸಿ :-

ದಿನಾಂಕ 06.10.2022 ರಂದು 1100 ಗಂಟೆಗೆ ಫಿರ್ಯಾಧಿ ಶೇಕ ಸಿರಾಜೊದ್ದಿನ ತಂದೆ ಶೇಕ ಮೈನೊದ್ದಿನ, ವಯ: 58 ವರ್ಷ, ಜಾತಿ: ಮುಸ್ಲಿಂ, ಉ: ಡ್ರೈವರ ಕೆಲಸ, ಸಾ|| ಬಗದಲ ರವರು ಠಾಣೆಗೆ ಬಂದು ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಇವರ ಹತ್ತಿರ ಒಂದು ಐಚೇರ ಕಂಪನಿಯ 1110 ಟ್ರಕ್ ಗುಡ್ಸ್ ವಾಹನ ಸಂಖ್ಯೆ ಕೆಎ38ಎ4159 ನೇದ್ದು ಇರುತ್ತದೆ.  ಐಚೇರ ವಾಹನದ ಮೇಲೆ ಡ್ರೈವರ ಕೆಲಸ ಮಾಡಿಕೊಂಡು ಉಪ ಜೀವಿಸುತ್ತಿದ್ದು ದಿನಾಲು  ಐಚೇರ ವಾಹನವನ್ನು ರಾತ್ರಿ ವೇಳೆಯಲ್ಲಿ  ಮನೆಯ ಪಕ್ಕದಲ್ಲಿ ಹಳೆಯ ಸರಕಾರಿ ಆಸ್ಪತ್ರೆಯ ಹತ್ತಿರ ನಿಲ್ಲಿಸುತಿರುತ್ತಾರೆ ದಿನಾಂಕ 04.10.2022 ರಂದು ಮುಂಜಾನೆ  ವಾಹನಕ್ಕೆ ಮನ್ನಾಏಖೇಳಿಯಲ್ಲಿ ಸಣ್ಣ ಪುಟ್ಟ ರಿಪೇರಿ ಮಾಡಿ ರಾತ್ರಿ 8 ಗಂಟೆಯ ಸುಮಾರಿಗೆ ಹಳೆಯ ಸರಕಾರಿ ಆಸ್ಪತ್ರೆಯ ಹತ್ತಿರ ನಿಲ್ಲಿಸಿರುತ್ತಾರೆ ನಂತರ  ಮನೆಯಲ್ಲಿ ಊಟ ಮಾಡಿ ಮಲಗುವ ಮುಂಚೆ ರಾತ್ರಿ 11 ಗಂಟೆಯ ಸುಮಾರಿಗೆ  ಐಚೇರ ವಾಹನವನ್ನು ನೋಡಿ ಮಲಗಿರುತ್ತಾರೆ ದಿನಾಂಕ 05.10.2022 ರಂದು ಮುಂಜಾನೆ 7 ಗಂಟೆಯ ಸುಮಾರಿಗೆ  ಐಚೇರ ವಾಹನವನ್ನು ನೋಡಲು ಐಚೇರ ವಾಹನ ಕಾಣಲಿಲ್ಲ, ಯಾರೋ ಕಳ್ಳರು ನನ್ನ ಗೂಡ್ಸ ಐಚೇರ ವಾಹನ ಸಂಖ್ಯೆ ಕೆಎ38ಎ4159 ನೇದು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಅಂದಾಜು ಕಿಮ್ಮತ್ತು 4,25,000/- ರೂಪಾಯಿಗಳು ಇರುತ್ತದೆ. ಸದರಿ ಘಟನೆಯು ದಿನಾಂಕ 04.10.2022 ರಂದು ರಾತ್ರಿ 11 ಗಂಟೆಯಿಂದ ದಿನಾಂಕ 05.10.2022 ರಂದು 7 ಗಂಟೆಯ ಮಧ್ಯದ ಅವದಿಯಲ್ಲಿ ನಡೆದಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಚಿಟಗುಪ್ಪಾ ಪೊಲೀಸ ಠಾಣೆ ಅಪರಾಧ ಸಂಖ್ಯೆ 116/2022 ಕಲಂ 279,  304(A) ಐಪಿಸಿ :-

ದಿನಾಂಕ 06/10/2022 ರಂದು 0530 ಗಂಟೆಗೆ ಫಿರ್ಯಾದಿ ರೇಣುಕಾ @ ಶಾಣು ಗಂಡ ಭರತ ಚಾಮಾಲೆ, ವಯ:30 ವರ್ಷ ಜಾತಿ:ಟೊಕರಿಕೊಳ್ಳಿ, ಉ:ಕೂಲಿ, ಸಾ:ತಿಪರಂತ ಬಸವಕಲ್ಯಾಣ, ತಾ/ಬಸವಕಲ್ಯಾಣ, ರವರ ತಂದೆ  ಮಚೆಂದ್ರ  ರವರು ದಿನಾಂಕ 05/10/2022 ರಂದು ರಾತ್ರಿ 07:00 ಪಿ.ಎಮ್ ಗಂಟೆಯ ಸುಮಾರಿಗೆ   ಅಂಬ್ರೇಶ ಹಾಗು ನಾಗೇಶ ಮೂಗರು ಮುಸ್ತಾಪೂರ ಪಾಟಿಯ ಹತ್ತಿರ ರೋಡಿನ ಮೇಲೆ ನಿಂತಾಗ ಕಲಬುರ್ಗಿ-ಹುಮನಾಬಾದ ರಾ.ಹೆ-50 ಮುಸ್ತಾಪೂರ ಪಾಟಿಯ ಮದರಸಾಬ ದರ್ಗಾದ ಹತ್ತಿರ ರೋಡಿನ ಮೇಲೆ  ಮುಸ್ತಾಪೂರ ಪಾಟಿಯಿಂದ ಮನೆಯ ಕಡೆಗೆ ನಡೆದುಕೊಂಡು ಹೋಗುವಾಗ ಎದುರಗಡೆಯಿಂದ ಅಂದರೆ ಹುಮನಾಬಾದ ಕಡೆಯಿಂದ ಒಂದು ಕಾರ ನಂ:ಟಿ,ಎಸ್-06,ಇ,ಎ-4114 ನೇದ್ದರ ಚಾಲಕನಾದ ಬಾಲಕೃಷ್ಣಾ ತಂದೆ ವೆಂಕಟೇಶರಾವ ಸಾ/ಹೈದ್ರಾಬಾದ ಈತನು ತನ್ನ ಕಾರನ್ನು ಅತೀವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ಮಚೇಂದ್ರರವರಿಗೆ ಡಿಕ್ಕಿಮಾಡಿ ಅಪಘಾತ ಪಡಿಸಿ ಕಾರ ಚಾಲಕನ್ನು ಕಾರನ್ನು ಸ್ವಲ್ಪ ಮುಂದೆ ಹೋಗಿ ಕಾರ ನಿಲ್ಲಿಸಿದ್ದು  ಬಂದು ನೋಡಲು ನಮ್ಮ ಕಾಕ ಮಚೆಂದ್ರ ರವರಿಗೆ ಎಡಮೊಳಕಾಲ ಕೇಳಗೆ ಭಾರಿರಕ್ತಗಾಯವಾಗಿ ಮೂಳೆ ಮುರಿದಿರುತ್ತದೆ, ಮತ್ತ ಎಡಗಣಿನ ಮೇಲೆ ತಲೆಗೆ ಹತ್ತಿ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.